ಇಂಪ್ರೆಸ್ ಮಾಡುವ ಅಗತ್ಯವಿಲ್ಲ" ಎನ್ನುತ್ತ ಅಂತರವೆನ್ನುವುದು ಅತಿರೇಕಕ್ಕೆ ಹೋಗುವಷ್ಟು ದೂರ ಸರಿದಿದ್ದ.

ಗೌತಮನ ನೆನಪು ಬಂದಿದ್ದೇ ತಡ ಅರುಂಧತಿಯ ಮನಸ್ಸು ಕದಡಿ ರಾಡಿಯಾದಂತೆ ಅನ್ನಿಸಿ ಮುಂದಿನದನ್ನು ನೆನಪಿಸಿಕೊಳ್ಳುವ ಗೋಜಿಗೆ ಹೋಗದೆ ಸೀದಾ ಆಸ್ಪತ್ರೆಯ ಗೋಡೆಗಳ ನಡುವೆ ಬಂದು ಮತ್ತೆ ಬಂದಿಯಾಯಿತು. ಮಡುಗಟ್ಟಿದ ಲಹರಿಗಳ ಹಿಡಿಯಲ್ಲಿಟ್ಟುಕೊಂಡು ಸುಮ್ಮನೆ ಮಲಗಿದಳು. ಎಷ್ಟೋ ಹೊತ್ತು ಕಳೆದ ಮೇಲೆ ಅವಳು ಮಲಗಿದ್ದ ಆ ರೂಮಿನಲ್ಲಿ ಸಣ್ಣ ಸಣ್ಣ ಸದ್ದುಗಳು ಆರಂಭವಾದವು. ಯಾವುದೋ ಹೆಂಗಸು ಪಕ್ಕದ ಗೋಡೆಯ ಆಚೆಯಲ್ಲಿ ಜೋರು ಜೋರು ಕಿರುಚುತ್ತಿರುವ ಸದ್ದು ಸಣ್ಣಗೆ ಕೇಳುತ್ತ ಬಂದು ಜೋರಾಯಿತು. ಅದನ್ನು ಆಲಿಸುತ್ತಿರುವಂತೆಯೇ ಅರುಂಧತಿಯ ಹತ್ತಿರಕ್ಕೂ ನರ್ಸ್ ಒಬ್ಬಳು ಬಂದು, "ರೆಡಿಯಾ" ಎಂದಳು. ಆಕೆ ರೆಡಿಯಾ ಅಂದದ್ದು ಯಾಕೆ ಎಂಬುದು ಈಗಾಗಲೇ ಮೂರು ಬಾರಿ ಅದೇ ರೀತಿಯ ಸ್ಟ್ರೆಚರ್‌ನ ಮೇಲೆ ಮಲಗಿ ಎದ್ದು ಹೋದವಳಿಗೆ ಅರಿವಾಗಿತ್ತು. "ಹೌದು" ಎನ್ನುವಂತೆ ನಿರ್ವಿಕಾರವಾಗಿ ತಲೆಯಾಡಿಸಿ ತನ್ನ ಎರಡೂ ಮಂಡಿಯನ್ನು ಅರ್ಧ ಮಡಿಚಿ, ತನ್ನೆರಡು ಕಾಲುಗಳ ನಡುವೆ ಅಂತರವನ್ನು ಹೆಚ್ಚಿಸಿಕೊಂಡಳು. "ಈಗಲೇ ಬೇಡ, ಹೆರಿಗೆ ರೂಮಿಗೆ ಶಿಫ್ಟ್ ಆದಮೇಲೆ, ಕಳೆದ ಬಾರಿ ಅಲ್ಲೇ ತಾನೇ ಇದ್ದಿದ್ದು ನೀವು" ಎನ್ನುತ್ತ ನರ್ಸ್, ಸರಿದಿದ್ದ ಗೌನನ್ನು ಮತ್ತೆ ಮುಚ್ಚಿ ಗೌಪ್ಯತೆಯನ್ನು ಗೌಪ್ಯವಾಗಿಟ್ಟಳು. ಪಕ್ಕದಲ್ಲೇ ಇದ್ದ ಹೆರಿಗೆ ಕೋಣೆಯಲ್ಲಿ ಕೂಗುವುದು ಜೋರು ಜೋರು ಕೇಳಿಸುತ್ತಿತ್ತು. "ಬೇಡ ಅಂದರೂ ಕೇಳಲಿಲ್ಲ ಹಾಳಾದವ ನನ್ನ ನೋವು ತಿನ್ನುವಂತೆ ಮಾಡಿದ" ಎನ್ನುತ್ತ ಆಕೆ ಕೂಗುವುದು ಕೇಳಿ ಅರುಂಧತಿ ಆ ಕ್ಷಣಕ್ಕೆ ಅವಾಕ್ಕಾದಳು. ಅಲ್ಲೇ ನಿಂತು ಗಮನಿಸುತ್ತಿದ್ದ ಐವತ್ತರ ಹರೆಯದ ಆಯಾ ಒಬ್ಬಳು. ತುಸು ವಾರೆ ಮುಖದಲ್ಲಿ ನಕ್ಕು ಇವಳ ಕಣ್ಣುಗಳನ್ನೇ ನೋಡಿ ಬಳಿಯಿದ್ದ ನರ್ಸಿನ ಹತ್ತಿರ, "ರಾತ್ರಿ ಸುಮ್ಮನೆ ಮಲಗಿಕೊಂಡರೆ ಈ ಸಂಕಟ ಯಾಕಿರತ್ತೆ" ಎಂದು ಹಾಸ್ಯ ಚಟಾಕಿ ಹಾರಿಸಿದಳು. ನರ್ಸ್ ಕೂಡ, "ಅವ್ಳು ಮಲಗಿದರು ಅವ ಸುಮ್ಮನಿರಬೇಕಲ್ಲ" ಮಾತು ಸೇರಿಸಿ ಸುಮ್ಮನೆ ನಕ್ಕಳು.

ಅರುಂಧತಿಗೆ ಎದೆಯೊಳಗೆ ಕೊಳ್ಳಿದೆವ್ವ ಓಡಾಡಿದಂತೆ ಭಾಸವಾಯಿತು. ಆಕೆ ಸುಮ್ಮನೆ ಒಮ್ಮೆ ತಿರುಗಿ ಅವರಿಬ್ಬರ ಕಡೆಗೆ ನೋಡಿದಳು. ನರ್ಸ್ ಹಲ್ಲು ಕಚ್ಚಿಕೊಂಡಳಾದರೂ ಆಯಾ ಮಾತ್ರ ಅದನ್ನು ಸಮರ್ಥಿಸಿಕೊಳ್ಳುವವಳಂತೆ, "ಅಯ್ಯಾ ಇರೋದನ್ನ ಏಳುದ್ನಪ್ಪ. ಇವ್ರು ರಾತ್ರಿ ಎಲ್ಲ ಸುಖ ಪಟ್ಕೊಂಡು ಈವಾಗ ನಮ್ ತವ ಕೂಗ್ ಕೊಂಡ್ರೆ ಏನ್ ಬತ್ತದೆ" ಎಂದಳು. ಅರುಂಧತಿಗೆ ಒಮ್ಮೆ ಹಾವು ಮೆಟ್ಟಿದಂತಾಗಿ ಸುಮ್ಮನೆ ಅವಳನ್ನೇ ಒಮ್ಮೆ ನೋಡಿದಳು. ಬೋಳು ಹಣೆ ಬರಿಗೈ ನಿರ್ವಿಕಾರ ಭಾವ ಅವಳ ಕುರಿತಾಗಿ ಬೇರೆ ಏನನ್ನೋ ಧ್ವನಿಸಿತು. "ನಿಂಗೇನೋ ಗಂಡ ಇಲ್ಲ ಅಂದ್ರೆ ಎಲ್ಲರಿಗೂ ಹಂಗೆನಾ" ಎನ್ನುತ್ತ ನರ್ಸ್ ಆಯಾಳನ್ನು ಉಚಾಯಿಸಿದಳು. "ನೀನೇಳದು ಸೈಯ್ಯೇ ಎಲ್ಲದಕ್ಕೂ ಪಡ್ಕಂಡು ಬಂದಿರಬೇಕು" ಎನ್ನುತ್ತ ಅವರಿಬ್ಬರು ಮತ್ತೇನನ್ನೋ ಅಂದುಕೊಳ್ಳುತ್ತ ಅಲ್ಲಿಂದ ಹೊರಟು ಹೋದರು...

ಮೌನ ಮತ್ತೆ ಆವರಿಸಿತು. ಅರುಂಧತಿಗೆ ಮಲಗಿ ಮಲಗಿ ಬೇಸರವಾಗಿ ಎದ್ದು ಕೂತಳು. ಹಾಕಿದ್ದ ಗೌನ್ ಸರಿದು ಹಿಂಭಾಗ ಪೂರ್ತಿ ಬೆತ್ತಲಾಯಿತು. ಆಕೆಗೆ ಏನೂ ಅನ್ನಿಸಲಿಲ್ಲ. ಹಾಗೆಯೇ ಕೂತಳು. ನುಗ್ಗಿ ಬರುತ್ತಿದ್ದ ಏಸಿಯ ಗಾಳಿ ಹಿಂಬದಿಯಿಂದ ತೂರಿಬಂದು ದೇಹದ ಮೂಲೆ ಮೂಲೆಗೂ ಕಚಗುಳಿ ಇಡುತ್ತಿರುವಂತೆ ಭಾಸವಾಯಿತು. ಎಷ್ಟು ದಿನವಾಗಿ ಹೋದವು